# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಸುಂದರ ಪ್ರಭು, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶಿರ್ವ ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರ ಪತ್ರ ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂವೈಎಸ್/6477/2014/ಪಿಪಿ, ದಿನಾಂಕ: 01.04.2017..

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ನಿಬಂಧಕರು ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಲಗತ್ತಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(1) ಮತ್ತು 12(3)ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 22/23-02-2017 ರ ವರದಿಯಲ್ಲಿ ದೂರುದಾರರಾದ ಶ್ರೀ ವೆಂಕಟೇಶ್ ರಾಮಣ್ಣ ಪ್ರಭು ಇವರು ಶಿರ್ವ ಗ್ರಾಮದ ಬಂಟಕಲ್ಲು ಎಂಬಲ್ಲಿ ತಮ್ಮ ಮನೆಯ ಮುಂದೆ ಬಸ್ ಸ್ಟ್ಯಾಂಡ್ ಬದಿಯ ಜಾಗವನ್ನು ಅನಧಿಕೃತವಾಗಿ ಉಪಯೋಗಿಸಿಕೊಂಡು ಕಟ್ಟಡವನ್ನು ಕಟ್ಟಿರುತ್ತಾರೆ. ಈ ಬಗ್ಗೆ ಶಿರ್ವ ಗ್ರಾಮ ಪಂಚಾಯತಿ, ಪಿಡಬ್ಲ್ಯೂಡಿ, ತಹಶಿಲ್ದಾರ್ ಕಛೇರಿ, ಸಹಾಯಕ ಕಮೀಷನರ್ ರವರ ಕಛೇರಿಗೆ ಹಾಗೂ ಜಿಲ್ಲಾಧಿಕಾರಿಗಳ ಕಛೇರಿಗೆ ದೂರು ನೀಡಿದ್ದು, ಈ ಬಗ್ಗೆ ಶಿರ್ವ ಗ್ರಾಮ ಪಂಚಾಯತಿ ಮತ್ತು ಪಿಡಬ್ಲ್ಯೂಡಿ ಇಲಾಖೆಯಿಂದ ಸದರಿ ಅನಧಿಕೃತ ಕಟ್ಟಡ ತೆರವುಗೊಳಿಸಲು ಆದೇಶವಾಗಿರುತ್ತದೆ. ಆದರೂ ಗ್ರಾ.ಪಂ ಸದಸ್ಯರಾದ ಶ್ರೀ ಕೆ.ರಾಮರಾಯ ಪಾಟ್ಕರ್ ರವರ ಬೆಂಬಲದಿಂದ ರಿಕ್ಷಾ ಚಾಲಕ ಮಾಲೀಕ ಸಂಘದವರು ಸದರಿ ಕಟ್ಟಡವನ್ನು ತೆರವುಗೊಳಿಸಲು ತಡೆಯೊಡ್ಡಿದ್ದಾರೆ. ಸದರಿ ಕಟ್ಟಡ ತೆರವುಗೊಳಿಸಿ ಕೊಡಬೇಕೆಂದು ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ. ಎಂದು ತಿಳಿಸಿರುತ್ತಾರೆ.

ಸದರಿ ದೂರಿನ ಆಧಾರದ ಮೇಲೆ ಗೌರವಾನ್ವಿತ ಉಪಲೋಕಾಯುಕ್ತರು ದೂರುದಾರರು ಮಾಡಿರುವ ಆರೋಪದಂತೆ ಅನಧೀಕೃತ ಕಟ್ಟಡ ನಿರ್ಮಾಣವಾಗಿದ್ದರೆ, ಸದರಿ ಕಟ್ಟಡ ತೆರವುಗೊಳಿಸಿ ಸಂಬಂಧಪಟ್ಟವರ ಮೇಲೆ ಕಾನೂನು ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶಿರ್ವ ಗ್ರಾಮ ಪಂಚಾಯಿತಿ ಇವರಿಗೆ ತಿಳಿಸಿ ಆದೇಶ ನೀಡಿದ್ದರು. ಅದರಂತೆ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸುಂದರ ಪ್ರಭುರವರು ವರದಿಯನ್ನು ಸಲ್ಲಿಸದ ಕಾರಣ ನೆನಪೋಲೆಗಳನ್ನು ನೀಡಲಾಗಿತ್ತು. ನಂತರ ದಿ:13/11/2014 ರಂದು ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಅದರಲ್ಲಿ ಉಡುಪಿ ತಾಲ್ಲೂಕು, ಶಿರ್ವ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಶಿರ್ವ ಬಂಟಕಲ್ಲು ಎಂಬಲ್ಲಿ ಬಸ್ಸು ತಂಗುದಾಣದ ಬದಿಯಲ್ಲಿ ರಿಕ್ಷಾ ಮಾಲೀಕರು ಹಾಗೂ ಚಾಲಕರ ಸಂಘ, ಬಂಟಕಲ್ಲು ಸಂಸ್ಥೆಯವರು ಅವರ ಸಂಘದ ಕಛೇರಿಗೆ ತಾತ್ಕಾಲಿಕವಾಗಿ ಸಿಮೆಂಟ್ ಶೀಟ್ ಹಾಕಿ ಒಂದು ಕೋಣೆಯನ್ನು ರಚಿಸಿರುತ್ತಾರೆ. ಸದರಿ ಸ್ಥಳ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಸದರಿ ಲೋಕೋಪಯೋಗಿ ರಸ್ತೆ ಅಭಿವೃದ್ಧಿ ಪಡಿಸುವಾಗ ಅಥವಾ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆ ಬಂದಲ್ಲಿ ಅದನ್ನು ತೆರವುಗೊಳಿಸುವುದಾಗಿ ಗ್ರಾಮ ಪಂಚಾಯಿತಿಗೆ ಕರಾರು ಪತ್ರ (ಮುಚ್ಚಳಿಕೆ) ನೀಡಿ ತಾತ್ಕಾಲಿಕವಾಗಿ ಶೆಡ್ ಅನ್ನು ರಚಿಸಿರುತ್ತಾರೆ. ಸದರಿ ಕೋಣೆಯ ಹಿಂಬದಿ ಯಾವುದೇ ವಾಸದ ಮನೆ ಕಟ್ಟಡಗಳು ಇರುವುದಿಲ್ಲ. ಬಸ್ಸು ತಂಗುದಾಣದ ಎಡ ಬದಿಯಲ್ಲಿರುವ ಮನೆ ಕಟ್ಟಡದ ಮಾಲೀಕರ ಅಥವಾ ಯಾವುದೇ ಗ್ರಾಮಸ್ಥರ ದೂರು ಅರ್ಜಿ ಬಂದಿರುವುದಿಲ್ಲ. ಆದರೆ, ಶ್ರೀ ವೆಂಕಟೇಶ್ ರಾಮಣ್ಣ ಪ್ರಭುರವರು ನೀಡಲಾದ ದೂರಿನ ಮೇರೆಗೆ ಸದರಿ ಕೋಣೆಯನ್ನು ತೆರವುಗೊಳಿಸಲು ರಿಕ್ಷಾ ಮಾಲೀಕ/ಚಾಲಕ ಸಂಘದವರಿಗೆ ನೋಟೀಸ್ ನೀಡಲಾಗಿರುತ್ತದೆ. ಈ ಬಗ್ಗೆ ಲೋಕೋಪಯೋಗಿ ಇಲಾಖೆಯವರು ರಸ್ತೆ ಅಭಿವೃದ್ಧಿ ಪಡಿಸುವಾಗ ಅಥವಾ ಸಾರ್ವಜನಿಕರಿಗೆ ಯಾವುದೇ ತೊಂದರೆ ಬಂದಲ್ಲಿ ಸದರಿ ತಾತ್ಕಾಲಿಕವಾಗಿ ರಚಿಸಲಾದ ಶೀಟಿನ ಕಟ್ಟಡವನ್ನು ಕೂಡಲೇ ತೆರವುಗೊಳಿಸುವುದಾಗಿ ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಯವರು ಗ್ರಾಮ ಪಂಚಾಯಿತಿಗೆ ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಇವರಿಗೆ ಲಿಖಿತವಾಗಿ ಬರೆದುಕೊಟ್ಟಿರುತ್ತಾರೆ. ಕಟ್ಟಡವನ್ನು

ತೆರವುಗೊಳಿಸುವ ಬಗ್ಗೆ ಗ್ರಾಮ ಪಂಚಾಯತಿಯಲ್ಲಿ ನಿರ್ಣಯ ಕೈಗೊಂಡ ಸದರಿ ವಿಷಯವನ್ನು ಲೋಕೋಪಯೋಗಿ ಇಲಾಖೆಗೆ ಪತ್ರ ಮುಖೇನ ತಿಳಿಸಲಾಗಿರುತ್ತದೆ. ನಿರ್ಮಿಸಲಾದ ಶೆಡ್‌ನ ಪೋಟೋವನ್ನು ಸಹ ತಮ್ಮ ಪತ್ರದೊಡನೆ ಅಡಕ ಮಾಡಿರುತ್ತಾರೆ. ಸದರಿ ಕಟ್ಟಡವನ್ನು ತೆರವುಗೊಳಿಸುವ ಬಗ್ಗೆ ಗ್ರಾಮ ಪಂಚಾಯತಿಯಲ್ಲಿ ನಿರ್ಣಯ ಕೈಗೊಂಡು ಲೋಕೋಪಯೋಗಿ ಇಲಾಖೆಗೆ ಬರೆದುಕೊಳ್ಳಲಾಗಿರುತ್ತದೆಂದು ತಿಳಿಸಿರುತ್ತಾರೆಂದು ಮಾನ್ಯ ಉಪಲೋಕಾಯುಕ್ತರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ವರದಿಯ ಆಧಾರದ ಮೇಲೆ ದೂರುದಾರರ ಪ್ರತ್ಯುತ್ತರವನ್ನು ಪಡೆಯಲಾಗಿದ್ದು, ರಿಕ್ಷಾ ಚಾಲಕರ/ಮಾಲೀಕರ ಸಂಘದ ಅನಧೀಕೃತ ಕಟ್ಟಡವು ದೂರುದಾರರಿಗೆ ಸೇರಿದ ಜಾಗ ಸರ್ವೆ ನಂಬರ್ 10/1ಬಿ ಯ ಎದುರುಗಡೆ ಇರುತ್ತದೆ. ಆ ಜಾಗವನ್ನು ತಮ್ಮ ತಂದೆ 1960 ರಲ್ಲಿ ಶ್ರೀ ಶಿವರಾಮ ನಾಯ್ಕರವರಿಂದ ಖರೀದಿಸಿರುತ್ತಾರೆ. ತಂದೆಯ ನಿಧನ ನಂತರ ಅವರ ವಾರಸುದಾರರಾದ ತಾನು ಮತ್ತು ತನ್ನ ಸಹೋದರ ಶ್ರೀ ಗಣೇಶ್ ರಾಮಣ್ಣಪ್ರಭು ಮತ್ತು ಸಹೋದರಿಯರಾದ ಶ್ರೀಮತಿ ಸರಸ್ವತಿ ಆರ್ ಪ್ರಭು ಮತ್ತು ಶ್ರೀಮತಿ ಲೀಲಾವತಿ ಆರ್ ಪ್ರಭು ಇವರಿಬ್ಬರೂ ಸದರಿ ಆಸ್ತಿಯನ್ನು ಸಮನಾಗಿ ಅನುಭವಿಸಿಕೊಂಡು ಬಂದಿರುತ್ತಾರೆ. ಸದರಿ ಜಾಗದಲ್ಲಿ ಈಗ ಶ್ರೀದೇವಣ್ಣ ಪ್ರಭು ಮತ್ತು ಮಕ್ಕಳು ವಾಸವಿರುತ್ತಾರೆ ಹೊರತು ಆ ಜಾಗದಲ್ಲಿ ಮಾಲೀಕರ್‍ಯಾರು ಇರುವುದಿಲ್ಲ. ರಿಕ್ಷಾ ಚಾಲನ/ಮಾಲೀಕ ಸಂಘದವರು ಸ್ಥಳೀಯ ಪಂಚಾಯತ್ ಸದಸ್ಯರಾದ ಶ್ರೀ ರಾಮರಾಯ ಪಾಟ್ಕರ್ ಇವರ ಬೆಂಬಲದಿಂದ ಜನಪ್ರತಿನಿಧಿಗಳಿಗೆ ಹಾಗೂ ಅಧಿಕಾರಿಗಳಿಗೆ ತಪ್ಪು ಮಾಹಿತಿಯನ್ನು ನೀಡಿರುತ್ತಾರೆ. ಶಿರ್ವ ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ದಿ:12/08/2010 ರಂದು ವಿಷಯ 7 ರಡಿಯಲ್ಲಿ ರಿಕ್ಷಾ/ಮಾಲೀಕ ಸಂಘದವರು ನಿರ್ಮಿಸಿರುವ ತಗಡು ಶೀಟಿನ ಬಗ್ಗೆ ಸರ್ವಾನುಮತದಿಂದ ನಿರ್ಣಯ ತೆಗೆದುಕೊಳ್ಳಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದರೆ, ಶಿರ್ವ ಗ್ರಾಮ ಪಂಚಾಯಿತ್‌ನಲ್ಲಿ ಈ ಬಗ್ಗೆ ರಿಕ್ಷಾ/ಚಾಲಕ ಮಾಲೀಕ ಸಂಘದವರು ನೀಡಿರುವ ಅರ್ಜಿಯ ಮಾಹಿತಿ ಲಭ್ಯವಿರುವುದಿಲ್ಲ. ಇದಲ್ಲದೇ, ರಿಕ್ಷಾ/ಚಾಲಕ ಮಾಲೀಕ ಸಂಘದವರು ಬರೆದುಕೊಟ್ಟಿರುವ ರೂ.50/- ಮೌಲ್ಯದ ಸ್ಟ್ಯಾಂಪ್ ಪೇಪರ್ ನಲ್ಲಿ ಬರೆದುಕೊಟ್ಟಿರುವರೆಂದು ಹೇಳಿರುವ ಅಫಿಡೆವಿಟ್ ನೋಟರಿಯಿಂದ ದೃಢೀಕೃತವಾಗಿರುವುದಿಲ್ಲ. ಲೋಕೋಪಯೋಗಿ ಇಲಾಖೆಯವರು ಸಹ ಕಟ್ಟಡ ತೆರವುಗೊಳಿಸಲು ಆದೇಶ ಸಂ: 537 ದಿ: 28/08/2013 ರಂತೆ ಆದೇಶಿಸಿರುತ್ತಾರೆ. ಗ್ರಾಮ ಪಂಚಾಯತಿಯಲ್ಲಿಯೂ ಸಹ ಅಕ್ರಮ ಕಟ್ಟಡ ತೆರವುಗೊಳಿಸಲು ದಿ: 31/08/2013ರಂದು ಕಟ್ಟಡವನ್ನು ತೆರವುಗೊಳಿಸಲು ನಿರ್ಣಯ ತೆಗೆದುಕೊಳ್ಳಲಾಗಿರುತ್ತದೆ. ಆದರೂ ಕೂಡ ಇದವರೆಗೂ ಅಕ್ರಮ ಕಟ್ಟಡವನ್ನು ತೆರವುಗೊಳಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ

ದೂರಿನಂಶಗಳನ್ನು ಎದುರುದಾರರ ವರದಿಯನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಹಾಜರುಪಡಿಸಿರುವ ಪೋಟೋ ಪರಿಶೀಲಿಸಿದಲ್ಲಿ ಸದರಿ ರಿಕ್ಷಾ ಚಾಲಕ/ಮಾಲೀಕರ ಸಂಘದ ಕಟ್ಟಡವನ್ನು ರಸ್ತೆಯ ಬದಿಯಲ್ಲಿಯೇ ಕಟ್ಟಿರುವುದಾಗಿ ಕಂಡು ಬರುತ್ತದೆ. ಸದರಿ ಪೋಟೋಗಳನ್ನು ಹಾಜರುಪಡಿಸಲಾಗಿದೆ. ಸದರಿ ಕಟ್ಟಡವು ಅನಧೀಕೃತ ಕಟ್ಟಡವೆಂದು ಶಿರ್ವ ಗ್ರಾಮ ಪಂಚಾಯಿತಿಯವರು ತೀರ್ಮಾನಿಸಿರುತ್ತಾರೆ. ಹಾಗೆಯೇ ಪಿಡಬ್ಲ್ಯೂಡಿ ಇಲಾಖೆಯವರು ಸಹ ಸದರಿ ಕಟ್ಟಡವು ಅನಧೀಕೃತ ಕಟ್ಟಡವೆಂದು ತಿಳಿಸಿರುತ್ತಾರೆ. ಹೀಗಿದ್ದರೂ ಸಹ ಸದರಿ ಅನಧೀಕೃತ ಕಟ್ಟಡವನ್ನು ಎದುರುದಾರರು ತೆರವುಗೊಳಿಸದೇ ವಿನ: ಕಾರಣವಿಳಂಬ ನೀತಿ ಅನುಸರಿಸುತ್ತಿರುವುದು ಕಂಡು ಬರುತ್ತದೆ. ರಿಕ್ಷಾ/ಚಾಲಕ ಮಾಲೀಕ ಸಂಘದವರು ಪಂಚಾಯತಿಗೆ ಒಂದು ಮುಚ್ಚಳಿಕೆ ಬರೆದುಕೊಟ್ಟಿರುವುದರಿಂದ, ಸದರಿ ಅಕ್ರಮ ಕಟ್ಟಡವನ್ನು ತೆರವುಗೊಳಿಸಿಲ್ಲವೆಂದು 1ನೇ ಎದುರುದಾರರು ತಿಳಿಸಿರುತ್ತಾರೆ. ದಿ:20/04/2015 ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಬರೆದಿರುವ ಪತ್ರದ ಪ್ರತಿಯನ್ನು ಹಾಜರು ಪಡಿಸಿದ್ದು, ಸದರಿ ಪತ್ರದಲ್ಲಿ ಸದರಿ ರಿಕ್ಷಾ ಚಾಲಕ/ಮಾಲಿಕ ಸಂಘದ ಕಟ್ಟಡವನ್ನು ಕಟ್ಟಲು ಶಿರ್ವ ಗ್ರಾಮ ಪಂಚಾಯತಿಯಿಂದಾಗಲಿ ಅಥವಾ ಲೋಕೋಪಯೋಗಿ ಇಲಾಖೆಯವರಿಂದಾಗಲಿ ಅನುಮತಿ/ನಿರಾಕ್ಷೇಪಣಾ ಪತ್ರವನ್ನು ಪಡೆದುಕೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ

ಸದರಿ ದೂರುದಾರರ ದೂರು ಅರ್ಜಿ ಮತ್ತು ಮಾನ್ಯ ಉಪಲೋಕಾಯುಕ್ತ ವರದಿಯಂತೆ ಎದುರುದಾರರಾದ ಶ್ರೀ ಸುಂದರ ಪ್ರಭು, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶಿರ್ವ ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರು ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪ್ರಾಮಾಣಿಕತೆ,ಸಂಪೂರ್ಣ ನಿಷ್ಠೆ ತೋರದೆ, ಕರ್ತವ್ಯಲೋಪವೆಸಗಿ ಅವ್ಯವಹಾರ, ದುರ್ನಡತೆಯಿಂದ ವರ್ತಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ

ರೀತಿಯಲ್ಲಿ ನಡೆದದುಕೊಂಡಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮ 1957 ರ 14-ಎ ರನ್ವಯ ಎದುರುದಾರರ ವಿರುದ್ಧ ವಿಚಾರಣೆ ಮಾಡಲು ಈ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/302/ಗ್ರಾಪಂಕಾ/2017 ಬೆಂಗಳೂರು, ದಿನಾಂಕ:16-05-2017**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಸುಂದರ ಪ್ರಭು, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶಿರ್ವ ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು,ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.(ಇದರೊಂದಿಗೆ ಈ ಪ್ರಕರಣದ ಮೂಲ ದಾಖಲಾತಿಯನ್ನು ಪುಟ ಸಂಖ್ಯೆ 01 ರಿಂದ 48 ರವರೆಗೆ ಲಗತ್ತಿಸಲಾಗಿದೆ.)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಉಡುಪಿ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ.
6. ಶ್ರೀ ಸುಂದರ ಪ್ರಭು, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಶಿರ್ವ ಗ್ರಾಮ ಪಂಚಾಯತಿ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ
7. ಗಣಕ ಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.